**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 02.04.2025**

**ಮುಖ್ಯ ವಿಚಾರಣೆ - ಎದುರುದಾರರು ಪರ ವಕೀಲರಿಂದ :**

ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

ಅಧಿಕಾರ ಪತ್ರವನ್ನು ನಿಆರ್-1 ಎಂದು ಗುರುತಿಸಲಾಯಿತು.

**ಮುಖ್ಯ ವಿಚಾರಣೆ - ಅರ್ಜಿದಾರರ ಪರ ವಕೀಲರಿಂದ :**

ಎಲ್ ಎ ಸಿ 2/2017 ಮತ್ತು ಮಿಸ್ 1/2016 ಮತ್ತು ಈ ಪ್ರಕರಣದ ಬಗ್ಗೆ ಆಗಿರುವ ನೋಟಿಫಿಕೇಷನ್ ಒಂದೇ ಬಾರಿ ಆಗಿದೆ ಎಂದರೆ ಸರಿ. ಎಲ್ ಎ ಸಿ 2/2017 ರಲ್ಲಿ ಈ ನ್ಯಾಯಾಲಯ ಪ್ರತಿ ಚದರ ಅಡಿ 960 ರೂಪಾಯಿ ಎಂದುನಿರ್ದಾರಿಸಲಾಗಿದೆ ಎಂದರೆ ಸರಿ. ಆದರೆ ನಾವು ಅದನ್ನು ಒಪ್ಪಿಕೊಂಡಿಲ್ಲ ಎಂದು ನುಡಿಯುತ್ತೇನೆ. ಮಿಸ್ 1/2016 ರಲ್ಲಿ ದಿನಾಂಕ 30.09.2024 ರ ಆದೇಶದಂತೆ ಪ್ರತಿ ಎಕರೆ 2 ಕೋಟಿ 50 ಲಕ್ಷ 90 ಸಾವಿರದ 560 ರೂಪಾಯಿ ಎಂದು ನಿರ್ದಾರಿಸಲಾಗಿದೆ ಎಂದರೆ ಸರಿ. ಸದರಿ ಆದೇಶವನ್ನು ನಾವು ಪ್ರಶ್ನೆ ಮಾಡಿರುತ್ತೇವೆ. ಎಲ್ ಎ ಸಿ 2/2017 ರ ಆದೇಶವನ್ನು ಮೂಲವಾಗಿಟ್ಟುಕೊಂಡು ಮಿಸ್ 1/2016 ರಲ್ಲಿ ಹೆಚ್ಚಿನ ಪರಿಹಾರ ನೀಡಿರುತ್ತಾರೆಂದರೆ ಸರಿ. ಸದರಿ ಪ್ರಕರಣಗಳ ಜಮೀನುಗಳು ಅಕ್ಕಪಕ್ಕ ಹಳ್ಳಿಯ ಜಮೀನುಗಳು ಎಂದರೆ ಸರಿ. ಮಿಸ್ 1/2016 ರಲ್ಲಿ ನಮ್ಮ ಕಚೇರಿಯಿಂದ 40 ಲಕ್ಷ ರೂಪಾಯಿ ಎಂದು ನಿರ್ದಾರಿಸಲಾಗಿದೆ ಎಂದರೆ ಸರಿ. ಸದರಿ ಹಣದ ಬದಲಾಗಿ ಇದೇ ನ್ಯಾಯಾಲಯ 2 ಕೋಟಿ 50 ಲಕ್ಷ 90 ಸಾವಿರದ 560 ರೂಪಾಯಿ ಹಣ ಹೆಚ್ಚಳ ಮಾಡಿದೆ ಎಂದರೆ ಸರಿ. ಲಾಲಗೊಲ್ಲನಹಳ್ಳಿಯಲ್ಲೂ ಸಹ ಎಸ್ ಎಲ್ ಓ ಕಚೇರಿಯಿಂದ ಪ್ರತಿ ಎಕರೆಗೆ 40 ಲಕ್ಷ ರೂಪಾಯಿ ಎಂದು ನಿರ್ದಾರಿಸಲಾಗಿದೆ ಎಂದರೆ ಸರಿ. 2 ಗ್ರಾಮಗಳು ಅಕ್ಕಪಕ್ಕದಲ್ಲಿರುವುದರಿಂದ ಹಾಗೂ ಅವುಗಳ ಮೌಲ್ಯ ಸಮಾನವಾಗಿ ಇರುವುದರಿಂದ 2 ಹಳ್ಳಿಗಳ ಜಮೀನುಗಳಿಗೆ ಪ್ರತಿ ಎಕರೆಗೆ 40 ಲಕ್ಷ ಎಂದು ನಿರ್ದಾರಿಸರುತ್ತಾರೆಂದರೆ ಸರಿ. ಆ ಕಾರಣ ದಿಂದ ಅರ್ಜಿದಾರರು 2 ಕೋಟಿ 50 ಲಕ್ಷ 90 ಸಾವಿರದ 560 ರೂಪಾಯಿ ಹೆಚ್ಚಿ ನ ಹಣಕ್ಕೆ ಅರ್ಹರಾಗಿರುತ್ತಾರೆಂದರೆ ಅದು ಕೃಷಿ ಭೂಮಿ ಆಗಿದ್ದರೆ ಕೊಡಬಹುದು ಎಂದು ನುಡಿಯುತ್ತಾರೆ. ಅರ್ಜಿದಾರರು ಹೆಚ್ಚಿನ ಪರಿಹಾರಕ್ಕೆ ಅರ್ಹರಾಗಿರುತ್ತಾರೆಂದರೆ ಸರಿಯಲ್ಲ.

**(ಎದುರುದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಅವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**